OS 72/2022
PW-1

**ಸಾಕ್ಷಿಯನ್ನು ಇಂದು ದಿನಾಂಕ 22-10-2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎನ್ ಆರ್ ಪ್ರತಿವಾದಿ ಪರ ವಕೀಲರಿಂದ ಃ**

ನನ್ನ ಮತ್ತು ಪ್ರತಿವಾದಿರವರ ಮನೆಯ ನಡುವೆ ರಸ್ತೆ ಇರುತ್ತದೆ ಎಂದರೆ 3 ಅಡಿ ಗಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ಮನೆಯ ಮುಂದುಗಡೆ ಸಹ 3 ಅಡಿ ಗಲ್ಲಿ ಇರುತ್ತದೆ ಎಂದರೆ ಸರಿ. ಪ್ರತಿವಾದಿರವರ ಮನೆ ಕಡೆಗೂ ಸಹ 4 ಅಡಿ ಗಲ್ಲಿ ಇರುತ್ತದೆ ಎಂದರೆ ಸಾಕ್ಷಿಯು 2 ಅಡಿ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ಮನೆ ಪ್ರತಿವಾದಿರವರ ಮನೆಯ ದಕ್ಷಿಣ ದಿಕ್ಕಿಗೆ ಇರುತ್ತದೆ ಎಂದರೆ ಸರಿ. ನನ್ನ ಮನೆ ಖರೀದಿ ಮಾಡಿದ ಆಸ್ತಿ ಇರುತ್ತದೆ. ಖರೀದಿ ಪತ್ರದಲ್ಲಿಯು ಸಹ ನನ್ನ ಮನೆಯ ಉತ್ತರ ದಿಕ್ಕಿಗೆ ಗಲ್ಲಿ ಇರುತ್ತದೆ ಎಂದು ಬರೆದಿರುತ್ತದೆ ಎಂದರೆ ಸರಿ. ಸದರಿ ದಾವೆ ಯೂವ ಆಸ್ತಿಗೆ ಸಂಬಂದಿಸಿದ ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿಯು ನನ್ನ ಆಸ್ತಿಗೆ ಸಂಬಂದಿಸಿದ್ದು ಎಂದು ನುಡಿಯತ್ತಾರೆ. ನಾನು ನನ್ನ ಮನೆಯನ್ನು ಖರೀದಿಸಿದ ನಂತರ ಪರವಾನಗಿಯನ್ನು ಪಡೆದುಕೊಂಡು ಕಟ್ಟವನ್ನು ಮಾಡಿರುತ್ತೇನೆ ಎಂದರೆ ಸರಿ. ಸದರಿ ನಮ್ಮ ಮನೆಯ ಎದುರುಗಡೆ ಲ್ಯಾಟರೀನ್ ಕಟ್ಟಲು ಪರವಾನಗಿ ಪಡೆದುಕೊಂಡಿಲ್ಲ ಎಂದರೆ ಸಾಕ್ಷಿಯು 4.5 ಅಡಿ ಜಾಗಾವನ್ನು ಪಾರ್ಕಿಂಗ್ ಸಲುವಾಗಿ ಬಿಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಮನೆಯ ಮುಂದು 5 ಅಡಿ ಜಾಗವನ್ನು ಪುರಸಭೆಯ ನಿಯಮದ ಪ್ರಕಾರ ಬಿಟ್ಟಿರುತ್ತೇನೆ ಎಂದರೆ ಸರಿ.

ನಾನು ನನ್ನ ಮನೆಯ ಮುಂದುಗಡೆ ಲ್ಯಾಟರೀನ್ ಕಟ್ಟುತ್ತಿರುವಾಗ ಪ್ರತಿವಾದಿರವರು ತಕರಾರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆದರಿಂದ ನನ್ನ ಮತ್ತು ಪ್ರತಿವಾದಿರವರ ನಡುವೆ ವೈಮನಸ್ಸು ಉಂಟಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ದಾವೆಯಲ್ಲಿ ಯೂವ ಸ್ವತ್ತಿಗೆ ದಾವೆಯನ್ನು ಸಲ್ಲಿಸಿರುತ್ತೇನೆ ಎಂಬುದರ ಬಗ್ಗೆ ನಮೂದಿಸಿಲ್ಲ ಎಂದರೆ ಸರಿಯಿಲ್ಲ. ಸಾಕ್ಷಿಯು ಮಂದುದವರೆದು ಪ್ರತಿವಾದಿರವರು 4 ಅಡಿ ಒತ್ತುವರಿ ಮಾಡಿರುವ ಬಗ್ಗೆ ದಾವೆಯನ್ನು ಸಲ್ಲಿಸಿರುತ್ತೇನೆ. ನನ್ನ ಮನೆಯ ಮುಂದುಗಡೆ 3 ಅಡಿ ಗಲ್ಲಿ ಇರುತ್ತದೆ ಎಂರದೆ ಸರಿ. ಸದರಿ 3 ಅಡಿ ಗಲ್ಲಿಯ ಜಾಗ ಬಿಟ್ಟು ಇನ್ನುಳಿದ ಜಾಗ ಪ್ರತಿವಾದಿರವರಿಗೆ ಸೇರಿದ್ದು ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿರವರ ಮನೆಯ ಬಾಜು ಇರುವ ಮನೆ ಆತನ ಅಣ್ಣನ ಮನೆ ಇರುತ್ತದೆ ಎಂದರೆ ಸರಿ. ನನ್ನ ಮತ್ತು ಪ್ರತಿವಾದಿರವರ ಅಣ್ಣನ ಮನೆ ಮೂಲೆಯಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಪ್ರತಿವಾದಿರವರ ಅಣ್ಣನ ಮನೆ ಇರುವುದಿಲ್ಲ ನನ್ನ ಮತ್ತು ಪ್ರತಿವಾದಿರವರ ಮನೆ ಮಾತ್ರ ಇರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿರವರ ಅಣ್ಣನ ಮನೆಯ ಹಿಂಭಾಗದಲ್ಲಿ 2 ಅಡಿ ಗಲ್ಲಿ ಇರುತ್ತದೆ. ಅಲ್ಲಿ 2 ಅಡಿ ಗಲ್ಲಿ ಇರುವುದಿಲ್ಲ ಆದರೆ 4 ಅಡಿ ಗಲ್ಲಿ ಇರುತ್ತದೆ ಎಂದರೆ

ಸರಿಯಿಲ್ಲ. ನಿ ಪಿ 2 ರಲ್ಲಿ ತೋರಿಸಿದ 54.6 ಅಡಿ ಲ್ಯಾಟರೀನು ಒಳಗೊಂಡು ಅಳತೆ ಇರುತ್ತದೆ ಎಂದರೆ ಸರಿ. ನಿ ಪಿ 2 ರಲ್ಲಿ ಪೂರ್ವ ದಿಕ್ಕಿಗೆ ಎಷ್ಟು ಅಳತೆ ಇರುತ್ತದೆ ಎಂದು ತೋರಿಸಿಲ್ಲ ಎಂದರೆ ಸರಿ. ನಿ ಪಿ 2 ರಲ್ಲಿ ತೋರಿಸಿದ ಜಾಗವನ್ನು ಖರೀದಿ ಪತ್ರದ ಪ್ರಕಾರ ನನಗೆ ಸೇರಿದ್ದು ಇಲ್ಲ ಎಂದರೆ ಸರಿಯಲ್ಲ. ಸದರಿ ಜಾಗ ರಸ್ತೆಗೆ ಸೇರಿದ್ದು ಇರುತ್ತದೆ ಎಂದರೆ ಸರಿಯಿಲ್ಲ. ಸದರಿ ಜಾಗ ಸಾರ್ವಜನಿಕ ರಸ್ತೆ ಇರುತ್ತದೆ ಎಂದು ನಕ್ಷೆಯಲ್ಲಿ ಹೇಳಿದ್ದಾರೆ ಎಂದರೆ ಸರಿಯಿಲ್ಲ. ನಿ ಪಿ 4 ರಲ್ಲಿ ಪ್ರಕಾರ ನನ್ನ ಮನೆಯ ಮುಂದೆ ಇರುವ ನಿ ಪಿ 2 ರಲ್ಲಿ ತೋರಿಸಿದ 4 ಅಡಿ ಜಾಗ ನನಗೆ ಸೇರಿದ್ದು ಇರುವುದಿಲ್ಲ ಎಂದರೆ ಸರಿಯಿಲ್ಲ.

ಲ್ಯಾಟರೀನ್ ಏರಿಯಾ 2 ಅಡಿ ಜಾಗ ಇರುತ್ತದೆ. ಸದರಿ ಲ್ಯಾಟರೀನ್ ಗೆ ಬಾಗಿಲು ಇರುತ್ತದೆ . ಅದರ ಅಳತೆ 1.5 ಇರುತ್ತದೆ. 2 ಅಡಿ ಜಾಗದಲ್ಲಿ ಲ್ಯಾಟರೀನ್ ಕಟ್ಟಲು ಸಾಧ್ಯ ಇಲ್ಲ ಅದಕ್ಕೆ ಕನಿಷ್ಠ 4 ಅಡಿ ಜಾಗ ಬೇಕಾಗಿರುತ್ತದೆ ಎಂದರೆ ಸಾಕ್ಷಿಯು ಚಿಡಿ ಒಳಗಡೆ ಇರುವ 2 ಅಡಿ ಜಾಗವನ್ನು ಇಡಿದುಕೊಂಡು ಕಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಅದನ್ನು ನಾನೇ ಕಟ್ಟಿರುತ್ತೇನೆ. ಹಳೆಯ ಅಳತೆ ನನಗೆ ಗೊತ್ತಿಲ್ಲ. ನಿ ಪಿ 1 ರಂತೆ ನಮ್ಮ ಮನೆಯ ಮುಂದಿರುವ 4 ಅಡಿ ಜಾಗವನ್ನು ನನಗೆ ಸೇರಿದಲ್ಲ ಎಂದರೆ ಸರಿಯಲ್ಲ. ನಿ ಪಿ 1 ರಲ್ಲಿ ಪೂರ್ವ ಹಾಗೂ ಪಶ್ಚಿಮ ದಿಕ್ಕಿಗೆ ಎಷ್ಟು ಅಳತೆ ಇದೆ ಎಂದು ನಮೂದಿಸಿಲ್ಲ ಎಂದರೆ ಸರಿ. ನಿ ಪಿ 1 ರಲ್ಲಿ ಎಷ್ಟು 56*21ಎಂದು ಬರೆದಿರುತ್ತಾರೆ ಎಂದರೆ ಸರಿ. ನಿ ಪಿ 1 ರಲ್ಲಿ ಇರುವ ಜಾಗಕ್ಕಿಂತ 9 ಅಡಿ ಹೆಚ್ಚು ಕಟ್ಟಡ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿ ಪಿ 2 ನಕ್ಷೆಯಲ್ಲಿ ಉತ್ತರ ದಿಕ್ಕಿಗೆ 12 ಹಾಗೂ 6 ಅಡಿ ಎಂದು ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಖರೀದಿಸಿದ ಜಾಗ 50*20 ಇರುತ್ತದೆ ಎಂದರೆ ಸರಿಯಲ್ಲ.

ನನಗೆ ಮಾರಾಟ ಮಾಡಿದವರು ಅತಿಕ್ರಮಣ ಮಾಡಿ ಲ್ಯಾಟರೀನು ಕಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಲ್ಯಾಟರೀನ್ ಗಲ್ಲಿಯ ಮಧ್ಯದಲ್ಲಿ ಬರುತ್ತದೆ ಎಂದರೆ ಸರಿಯಿಲ್ಲ. ನಿ ಪಿ 2 ರಂತೆ ನಮ್ಮ ಮನೆಯ ಮುಂದುಗಡೆ ಮೂಲೆಯಲ್ಲಿ ಪ್ರತಿವಾದಿರವರ ಅಣ್ಣನ ಮನೆಯ ಗೋಡೆ ಇರುತ್ತದೆ ಎಂದರೆ ಸರಿ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಪ್ರ. ದ. ನ್ಯಾ. ದಂ. ಸೇಡಂ.